ಕೋಟಿ ರೂಪಾಯಿಗಳಿಗೆ ಆಗಿದೆ. ಈ 787 ಕೋಟಿ ರೂಪಾಯಿಗಳಿಗೆ ಆಡಳಿತಾತ್ಮಕ ಮಂಜೂರಾತಿ ಆಗಬೇಕಾಗಿದೆ. ಈಗಾಗಲೇ ಅವರು ಹೇಳಿದಂತೆ, ನಾನು ಭಾರೀ ನೀರಾವರಿ ಮಂತ್ರಿಗಳಿಗೆ ಈ ವಿಚಾರದಲ್ಲಿ ಬಿನ್ನಹ ಮಾಡಿ ತಾವು ಒಂದು ಸಭೆಯನ್ನು ಕರೆಯಬೇಕು, ಕೆಲಸಪ್ರಾರಂಭಿಸಬೇಕು, ಎಂದು ಹೇಳುತ್ತೇನೆ. ತಾವು ಹೇಳಿದಂತೆ ಹಣಕಾಸಿನ ವಿಚಾರದಲ್ಲಿ ತೊಂದರೆ ಬರಬೇಕಾದಂಥ ಅಗತ್ಯತೆ ಇಲ್ಲ. ಆವತ್ತು ದಿವಂಗತ ಜೆ.ಹೆಚ್. ಪಾಟೀಲ್ ಇದ್ದಂಥ ಕಾಲದಲ್ಲಿ ಕರ್ನಾಟಕ ನೀರಾವರಿ ನಿಗಮ ಎಂದು ಮಾಡಿ ಕ್ರಿಟಿಕಲ್ ಪ್ರಾಜೆಕ್ಟ್ ಎಂದು ಏನು ಗುರುತಿಸಲ್ಪಟ್ಟಿದ್ದವು, ಅದರಲ್ಲಿ ಹುಲಿಗುಡ್ಡದ ಯೋಜನೆ ಕೂಡ ಒಂದಾಗಿದೆ. ಆ ಕಾರಣಕ್ಕಾಗಿ ಕರ್ನಾಟಕ್ಕಾಗಿ ನೀರಾವರಿ ನಿಗಮದಿಂದ ಈಗ 79 ಕೋಟಿ ರೂಪಾಯಿಗಳ ಹಣ ಲಭ್ಯವಾಗಿದೆ. ಮುಂದೆ ಕೂಡ ಹಣ, ಆಯವ್ಯಯದ ಮೇಲೆ ಅವಲಂಬಿತರಾಗಿರಬೇಕಾಗಿಲ್ಲ. ಈ ನೀರಾವರಿ ನಿಗಮದ ಮೂಲಕವಾಗಿ ಆ ಒಂದು ಅಣೆಕಟ್ಟಿಗೆ ನಾವು ಹನ ಕೊಡುತ್ತಿರುವುದರಿಂದ ಇಲ್ಲಿ ಆಡಳಿತಾತ್ಮಕ ದೋಷ ಮತ್ತು ವಿಳಂಬ ಕಾರಣವಾಗಿದೆ, ಹಣಕಾಸಿನ ತೊಂದರೆಯಿಲ್ಲ, ನಾವು ನೀವು ಕೂಡಿ ಪ್ರಯತ್ನಿಸಿ ಸ್ವಲ್ಪ ದಿವಸಗಳಲ್ಲಿ ಒಂದು ಸಭೆಯನ್ನು ಕರೆಸಿ ಈ ಕಾರ್ಯಕ್ರಮಗಳನ್ನು ಮಾಡಬೇಕಾಗಿದೆ ಎಂದು ನಾನು ಸರ್ಕಾರದ ಪರವಾಗಿ ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಕೆ.ಎಂ. ತಿಮ್ಮರಾಯಪ್ಪರವರು.. ಮಾನ್ಯ ಹೆಚ್.ಡಿ. ಬಸವರಾಜು ಅವರು.. ಮಾನ್ಯ ಅರಗ ಜ್ಞಾನೇಂದ್ರರವರು ಮಾನ್ಯ ಶಿಕಾಂತ ಅಕ್ಕಪ್ಪ ನಾಯಕ್‌ರವರು ಮಾನ್ಯ ಎಂ.ಪಿ. ರೇಣುಕಾಚಾರ್ಯರವರು.. ಮಾನ್ಯ ಪ್ರಭಾಕರ್ ಬಂಗೇರ್ ಅವರು.. ಯಾರೂ ಇಲ್ಲ.. ಮಾನ್ಯ ಶಿವರಾಜ್ ಸಜ್ಜನ್ ರವರು..

ವಿಷಯ (ಝ) : ಪಡಿತರ ವ್ಯವಸ್ಥೆಯಲ್ಲಿ ನಗರ ಹಾಗೂ ಗ್ರಾಮೀಣ ಪ್ರದೇಶಕ್ಕೂ ಇರತಕ್ಕ ತಾರತಮ್ಯವನ್ನು ಹೋಗಲಾಡಿಸುವ ಬಗ್ಗೆ

ಶ್ರೀ ಶಿವರಾಜ್ ಸಜ್ಜನ್ (ಹಾವೇರಿ) : ಮಾನ್ಯ ಅಧ್ಯಕ್ಷರೆ, ಪಡಿತರ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ನಗರಕ್ಕೆ 28 ಕೆ.ಜಿ. ಅಕ್ಕಿ, 7 ಕೆ.ಜಿ. ಗೋಧಿ, 2 ಕೆ.ಜಿ. ಸಕ್ಕರೆಯನ್ನು ವಿತರಣೆ ಬೇಕೆನ್ನುವ ಸರ್ಕಾರದ ನಿಯಮ ಇದ್ದರೂ ಕೂಡ, ಹಾವೇರಿ ತಾಲ್ಲೂಕಿನ ಒಂದು ಉದಾಹರಣೆ ಕೊಡುವುದಾದರೆ, ಹಾವೇರಿ ನಗರಕ್ಕೆ 28 ಕೆ.ಜಿ. ಅಕ್ಕಿ ಮತ್ತು 7 ಕೆ.ಜಿ. ಗೋಧಿ,ಯನ್ನು ಕೊಡುತ್ತಿದ್ದಾರೆ, ಸಕ್ಕರೆಯನ್ನು ಅನೇಕ ತಿಂಗಳುಗಳಿಂದ ಕೊಡುತ್ತಿಲ್ಲ. ಆದರೆ ಗ್ರಾಮೀಣ ಪ್ರದೇಶಕ್ಕೆ ಕೇವಲ 21 ಕೆ.ಜಿ. ಅಕ್ಕಿ, 2 ಕೆ.ಜಿ. 400 ಗ್ರಾಂ ಗೋಧಿ, ಕೊಟ್ಟು ಸುಮಾರು 6–7 ತಿಂಗಳುಗಳಿಂದ ಸಕ್ಕರೆಯನ್ನು ವಿತರಣೆ ಮಾಡುತ್ತಿಲ್ಲ. ಈ ನಗರ ಪ್ರದೇಶಕ್ಕೂ ಮತ್ತು ಗ್ರಾಮೀಣ ಪ್ರದೇಶಕ್ಕೂ ಏಕೆ ಈ ಅಕ್ಕಿ ಮತ್ತು ಗೋಧಿಯ ವಿತರಣೆಯಲ್ಲಿ ತಾರತಮ್ಯವನ್ನು ಮಾಡುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ನಾವು ಕೇಳಿದರೆ, ಸರ್ಕಾರದಿಂದ ಸಂಪೂರ್ಣ ಪ್ರಮಾಣದಲ್ಲಿ ಬರಬೇಕಾದಂಥ ಸಬ್ಸಿಡಿ ಬಾರದೇ ಇರುವುದರಿಂದ ನಾವು ನಗರ ಹಾಗೂ ಗ್ರಾಮೀಣ ಪ್ರದೇಶಕ್ಕೂ ಈ ಅಕ್ಕಿ ಹಾಗೂ ಗೋಧಿಯ ಸರಬರಾಜಿನಲ್ಲಿ ವ್ಯತ್ಯಾಸ ಆಗುತ್ತಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸುತ್ತಿದ್ದಾರೆ. ಇದು ಅನೇಕ ತಿಂಗಳುಗಳಿಂದ, ಇದು ಈ ತಿಂಗಳಿನಿಂದ ಅಷ್ಟೇ ಅಲ್ಲ. ಅನೇಕ ತಿಂಗಳುಗಳಿಂದ ಈ ಒಂದು ತಾರತಮ್ಯ ನಡೆಯುತ್ತಿರುವುದರಿಂದ ಇದನ್ನು ಶ್ರೀಘ್ರವಾಗಿ ಸಂಬಂಧಪಟ್ಟಂಥ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕೆಂದು ಹೇಳುತ್ತಾ, ಈ ತಾರತಮ್ಯವನ್ನು ಮಾಡಬಾರದು ಎಂದು ಹೇಳುತ್ತಾ ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ, ಮುಜರಾಯಿ, ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈ ದಿವಸವೇ ಜಿಲ್ಲಾಧಿಕಾರಿಗಳ ಜೊತೆಗೆ ಮಾತನಾಡಿ ತಾರತಮ್ಯದ ವಿಚಾರವನ್ನು ಪ್ರಸ್ತಾಪ ಮಾಡುತ್ತೇವೆ, ಆದರೆ ನಮ್ಮ ನೀತಿಯ ಪ್ರಕಾರ ಅಲ್ಲಿ 28 ಕೆ.ಜಿ. ಅವಶ್ಯಕತೆ ಇದೆ ಎಂದು ಹೇಳಿ ಅಲ್ಲಿಯ ಬೇಡಿಕೆಗಳಿಗನುಗುಣವಾಗಿ ಶೇಕಡ 50 ರಷ್ಟು ಕೊಡತಕ್ಕಂಥದ್ದನ್ನು ಇಲ್ಲಿಯವರೆವಿಗೂ ಪರಿಪಾಲಿಸಿಕೊಂಡು ಬಂದಿರುವಂಥದ್ದು ಒಂದು ಪದ್ಧತಿ. ಅದರಲ್ಲಿ 28 ಕೆ.ಜಿ.ಯ ಗರಿಷ್ಟ ಮಿತಿ ಬೇಕು ಎಂದು ಕೇಳುವುದಾದರೆ, ಅಷ್ಟು ಕೂಡ ಕೊಡುತ್ತಾರೆ ಅಥವಾ ಅಲ್ಲಿ ಅಷ್ಟು ಕೂಡ ಬೇಡಿಕೆ–ಯಿಲ್ಲ ಎನ್ನುವ ಸಂದರ್ಭ ಬಂದಾಗ ಶೇಕಡ 50 ರಷ್ಟು ಕೊಡುತ್ತಾರೆ. ಅದು ಈ ತರಹದಲ್ಲಿ ಏನಾದರೂ ತೊಂದರೆಯಾಗಿದೆಯೋ ಗೊತ್ತಿಲ್ಲ. ಆ ರೀತಿ ಏನಾದರೂ ಭಿನ್ನಾಭಿಪ್ರಾಯ, ತಾರತಮ್ಯ, ಎನ್ನತಕ್ಕಂಥದ್ದು ಇದ್ದರೆ ಅದಕ್ಕೆ ಕಾರಣ ಏನೆಂಬುದನ್ನು ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ಮಾನ್ಯ ಶಾಸಕರಿಗೆ ವಿಚಾರವನ್ನು ತಿಳಿಸುತ್ತೇನೆ.

ಶ್ರೀ ಶಿವರಾಜ್ ಸಜ್ಜನ್ : ಸುಮಾರು ತಿಂಗಳಿಗಳಿಂದ ಸಕ್ಕರೆಯನ್ನು ವಿತರಣೆ ಮಾಡುತ್ತಿಲ್ಲ, ಸುಮಾರು 6–7 ತಿಂಗಳುಗಳಿಂದ ಸಕ್ಕರೆಯನ್ನು ಕೊಡುತ್ತಿಲ್ಲ, ಮತ್ತು ಅಲ್ಲಿ ತಾರತಮ್ಯ ಏಕೆ ಮಾಡುತ್ತಿದ್ದಾರೆಂದರೆ, ಬೇಡಿಕೆ ಇರುವುದೇ ಗ್ರಾಮೀಣ ಪ್ರದೇಶದಲ್ಲಿ. ಅಕ್ಕಿ ಮತ್ತು ಗೋಧಿಗೆ ಹೆಚ್ಚಿನ ಬೇಡಿಕೆ ಇರುವುದೇ ಗ್ರಾಮೀಣ ಪ್ರದೇಶದಲ್ಲಿ. ಆದುದರಿಂದ, ನಗರ ಪ್ರದೇಶಕ್ಕೆ 28 ಕೆ.ಜಿ. ಕೊಡುತ್ತಿದ್ದಾರೆ, ಗ್ರಾಮೀಣ ಪ್ರದೇಶಕ್ಕೆ ಕೇವಲ 21 ಕೆ.ಜಿ. ಅಕ್ಕಿ ಹಾಗೂ ಗೋಧಿಯನ್ನು 2 ಕೆ.ಜಿ. 400 ಗ್ರಾಂ ಕೊಡುತ್ತಿದ್ದಾರೆ.

ವಿಷಯ (ಟ) : ಬಿತ್ತನೆ ಬೀಜಗಳಿಗೆ ಸಬ್ಸಿಡಿ ನೀಡುವ ಬಗ್ಗೆ

ಶ್ರೀ ಹೆಚ್. ನಿಂಗಪ್ಪ (ಕುಣಿಕಲ್) : ಮಾನ್ಯ ಅಧ್ಯಕ್ಷರೆ, ಇವತ್ತು ಬಿತ್ತನೆ ಬೀಜಗಳನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕ ಮಾರಾಟ ಮಾಡುತ್ತಿದ್ದರು. ಅದಕ್ಕೆ ಮೊದಲು ಸಬ್ಸಿಡಿಯನ್ನು ಕೊಡುತ್ತಿದ್ದರು; ಆದರೆ 24ನೇ ತಾರೀಖಿನಿಂದ ಸಬ್ಸಿಡಿ ಕೊಡತಕ್ಕಂಥದ್ದನ್ನು ನಿಲ್ಲಿಸಿದ್ದಾರೆ. ಇದರಿಂದ ರೈತರಿಗೆ ಬಹಳ ಅನಾನುಕೂಲವಾಗಿ ಬೀಜಗಳನ್ನು, ಬಿತ್ತನೆ ಬೀಜಗಳನ್ನು ಕೊಳ್ಳತಕ್ಕಂಥ ಪರಿಸ್ಥಿತಿಯಲ್ಲಿ ಇವತ್ತು ರೈತರು ಇಲ್ಲ. ಅದಕ್ಕೆ ಈಗ ತಾನೇ ಕುಣಿಕಲ್‌ನಿಂದ ಬಂದಂಥ ಸುದ್ದಿಯ ಪ್ರಕಾರ ರೈತರು ಒಂದು ಪ್ರತಿಭಟನೆ ಮಾಡತಕ್ಕಂಥ ಒಂದು ಕೆಲಸವನ್ನು ಮಾಡುತ್ತಿದ್ದಾರೆ. ಆದುದರಿಂದ, ದಯಮಾಡಿ ಸರ್ಕಾರದವರು ಈ ಬಗ್ಗೆ ಶೀಘ್ರವಾಗಿ ಗಮನ ಹರಿಸಿ, ರೈತ ಸಂಪರ್ಕ ಕೇಂದ್ರಗಳ ಮೂಲಕ ಏನು ಇವತ್ತು ಬಿತ್ತನೆ ಬೀಜಗಳನ್ನು ಮಾರಾಟ ಮಾಡುತ್ತಿದ್ದರೋ ಅದಕ್ಕೆ ಸಬ್ಸಿಡಿಯನ್ನು ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮುಂದು ವರಿಸಬೇಕೆಂದು ನಾನು ಇವತ್ತು ಕೇಳಿಕೊಳ್ಳುತ್ತೇನೆ.

12.30 ಪಿ.ಎಂ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ, ಮುಜರಾಯಿ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಹಿಂದಿನ ಸರ್ಕಾರ ಬಿತ್ತನೆ ಬೀಜಗಳಿಗೆ ರಿಯಾಯ್ತಿ ಕೊಡಬೇಕೆಂದು 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಸಣ್ಣ ಮತ್ತು ಅತೀ ರೈತರಿಗೆ ಕೊಡಬೇಕಾಗಿರತಕ್ಕಂಥ ಸೌಲಭ್ಯ ಇದಾಗಿದೆ. ಅದರೆ, ಅನೇಕ ಕಡೆ ಇದರ ದುರುಪಯೋಗವಾಗಿರತಕ್ಕಂಥದ್ದು, ಅಂದರೆ, ಇದರ ಲಾಭವನ್ನು ದೊಡ್ಡ ರೈತರು ಪಡೆದುಕೊಂಡಿದ್ದಾರೆ ಎನ್ನತಕ್ಕಂಥ ದೂರುಗಳೂ ಸಹ ಬಂದಿವೆ. ಮತ್ತೆ ಈಗಾಗಲೇ ಕೊಟ್ಟಿರತಕ್ಕಂಥ 50 ಕೋಟಿ ರೂಪಾಯಿ ಸಾಕಾಗುವುದಿಲ್ಲ ಎನ್ನತಕ್ಕಂಥ ವಿಚಾರ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಹಣಕಾಸಿನ ಸಚಿವರು ಆಗಿರತಕ್ಕಂಥ ಮಾನ್ಯ ಉಪ ಮುಖ್ಯಮಂತ್ರಿಯವರ ಜೊತೆ ಮಾತನಾಡಿ ತಾವು ಹೇಳಿದಂತೆ ಈ ಹಂಗಾಮಿನಲ್ಲಿಯೇ ಬೀಜವನ್ನು ಒದಗಿಸಿ ಕೊಡತಕ್ಕಂಥ ಜವಾಬ್ದಾರಿ ನಮ್ಮ ಮೇಲಿರುವುದರಿಂದ